ಮೂಲ ದಾವಾ ನಂ.81/2016

ಪಿ. ಡಬ್ಲುಃ 2

ಸಾಕ್ಷಿಯನ್ನು ದಿನಾಂಕ: 16-12-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್.ವಿ.ಎ. ವಕೀಲರಿಂದಃ**

ನಾನು ಹನುಮಂತ ಗೌಡರ ಮನೆಗೆ ಹೋಗಿ ಬರುತ್ತಿದ್ದೆ. ಆಗ ಅವನನ್ನು ನೋಡಿದ್ದೆ. ನಾನು ಅವರ ಮನೆಗೆ ವರ್ಷಕ್ಕೊಮ್ಮೆ ಜಾತ್ರೆಗೆ ಹೋದಾಗ ನೋಡಿದ್ದೇನೆ. ಆಗ ನನಗೆ 25 ವರ್ಷ ವಯಸ್ಸಾಗಿದ್ದುಆನಂತರ ಅವರನ್ನು ನೋಡಿರುತ್ತೇನೆ. ನಾನು 25 ವರ್ಷಕ್ಕಿಂತ ಕಡಿಮೆ ವಯಸ್ಸಿದ್ದಾಗ ನಾನು ಅವರ ಮನೆಗೆ ಹೋಗಿದ್ದೆ. ಆದರೆ ಅವರು ಸಿಕ್ಕಿರುವುದಿಲ್ಲ. ನನ್ನ ಜೊತೆ ನನ್ನ ತಾಯಿ ಅಥವಾ ಬೇರೆ ಯಾರನ್ನಾದರೂ ಕರೆದುಕೊಂಡು ಹೋಗುತ್ತಿದ್ದೆ. ನಾನು ನನ್ನ ಮಾವನ ಮಗನನ್ನು ಕರೆದುಕೊಂಡು ಅವರ ಮನೆಗೆ ಹೋಗುತ್ತಿದ್ದೆ. ಅವರು ಈಗ ಜೀವಂತ ಇದ್ದಾರೆ ಅವರ ಹೆಸರು ಮಂಜು ಶಂಭು ಗೌಡ. ನಾನು ಹನುಮಂತ ಗೌಡರವರನ್ನು ನೋಡಲು ಹೋದಾಗ 1 ಮತ್ತು 2 ನೇ ಪ್ರತಿವಾದಿಯರು ಅವರ ಜೊತೆ ಇದ್ದರು ಎಂದರೆ ಸರಿ. ಅವರು ಹನುಮಂತ ಗೌಡರ ಜೊತೆಗೆ ವಾಸವಾಗಿ ಬಂದಿದ್ದರು, ಯಾವಾಗಿನಿಂದ ವಾಸವಾಗಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಅವರು ಅನೇಕ ವರ್ಷಗಳಿಂದ ಹನುಮಂತ ಗೌಡರವರ ಜೊತೆ ವಾಸವಿದ್ದರು. ನಾನು ಹನುಮಂತ ಗೌಡರ ಮನೆಗೆ ಜಾತ್ರೆಗೆ ಹೋದಾಗ ನಮಗೂ ಮತ್ತು 1 ಮತ್ತು 2 ನೆ ಪ್ರತಿವಾದಿಗೆ ಯಾವುದೇ ಗಲಾಟೆ ಆಗಿರುವುದಿಲ್ಲ. ನಾನು ಅವರ ಮನೆಗೆ ಹೋದಾಗ 1 ಮತ್ತು 2 ನೇ ಪ್ರತಿವಾದಿ ಮನೆಯ ಒಳಗೆ ಕರೆದು ನಮ್ಮನ್ನು ಮಾತನಾಡಿಸುತ್ತಿದ್ದರು. ಹನುಮಂತ ಗೌಡ ಊರಿನಲ್ಲಿ ಇರುತ್ತಿರಲಿಲ್ಲ. ಹನುಮಂತ ಗೌಡ ಯಾರ ಯಾರದ್ದೋ ಮನೆಯಲ್ಲಿ ಕೆಲಸ ಮಾಡಿಕೊಂಡು ಅವರ ಮನೆಯಲ್ಲೇ ವಾಸಮಾಡುತ್ತಿದ್ದ. ಹನುಮಂತ ಗೌಡ ಮೃತಪಟ್ಟ ಒಂದು ವಾರದ ನಂತರ ನಮಗೆ ಮಾಹಿತಿ ಗೊತ್ತಾಗಿರುತ್ತದೆ. ಹನುಮಂತ ಗೌಡ ಮೃತಪಡುವ ಸಮಯದಲ್ಲಿ ಆತನ ಮಾನಸಿಕ ಸ್ಥಿತಿ ಹೇಗಿತ್ತು ಎಂದು ನನಗೆ ಗೊತ್ತಿಲ್ಲ. ಹನುಮಂತ ಗೌಡನಿಗೆ ಆತನ ಮನೆಯ ಹತ್ತಿರವೇ ಸ್ವಲ್ಪ ಜಮೀನು ಇತ್ತು ಎಂದು ಗೊತ್ತಿದ್ದು ಬೇರೆ ಆಸ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಜಮೀನಿನ ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾವು ಜೀವನಕ್ಕೆ ಪರಿಹಾರ ಕೊಡಿ ಎಂದು ಹನುಮಂತ ಗೌಡನನ್ನು ಕೇಳಿದ್ದು ಇರುವುದಿಲ್ಲ. ನೀವು ಯಾವತ್ತಾದರೂ ಹನುಮಂತ ಗೌಡನ ಹತ್ತಿರ ನಿಮ್ಮ ಹತ್ತಿರವೇ ಉಳಿಯುತ್ತೀರಾ ಎಂದರೆ ಸಾಕ್ಷಿ ಆ ರೀತಿ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಹನುಮಂತ ಗೌಡನ ಆರೋಗ್ಯ ಸ್ಥಿತಿ ಹೇಗಿತ್ತು ಎಂದು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ವಿಚಾರಿಸಿದ್ದೆವು ಸಾಕ್ಷಿ ಮುಂದುವರಿದು ಆತ ಯಾವಾಗಲೂ ಸಾರಾಯಿಯನ್ನು ಕುಡಿಯುತ್ತಿದ್ದ ಎಂದು ನುಡಿಯುತ್ತಾರೆ. ಹನುಮಂತ ಗೌಡ ಸಾರಾಯಿ ಕುಡಿದು ಬಿದ್ದುಕೊಂಡಿರುವುದನ್ನು ನಾನು ನೋಡಿರುತ್ತೇನೆ. ಆತ ಗೇರು ಮರದ ಕೆಳಗಡೆ ಸಾರಾಯಿ ಕುಡಿದು ಬಿದ್ದುಕೊಂಡಿರುತ್ತಿದ್ದ.

ಹನುಮಂತ ಗೌಡ ವಾಸವಿದ್ದದ್ದು ಖರ್ವಾದಲ್ಲಿ ಎಂದರೆ ಸರಿ. ನಾನು ಬೇರೊಳ್ಳಿಯಲ್ಲಿ ವಾಸವಿದ್ದೇನೆ. ಈ ಎರಡೂ ಗ್ರಾಮಗಳ ನಡುವೆ ಸುಮಾರು 15 ಕಿ.ಮೀ. ಅಂತರ ಇದೆ. ಹನುಮಂತ ಗೌಡ ಖರ್ವಾ ಗ್ರಾಮದಲ್ಲಿ ಸಾರಾಯಿ ಕುಡಿದು ಬಿದ್ದುಕೊಂಡಿರುತ್ತಿದ್ದ. ನಾನು ಖರ್ವಾ ಗ್ರಾಮಕ್ಕೆ ಹೋದಾಗ ಹನುಮಂತ ಗೌಡ ಕುಡಿದು ಬಿದ್ದಿದ್ದನ್ನು ನೋಡಿರುತ್ತೇನೆ. ಹನುಮಂತ ಗೌಡ ಕುಡಿದು ಬಿದ್ದುಕೊಂಡಿರುತ್ತಿದ್ದ ಎನ್ನುವ ವಿಚಾರವರನ್ನು ದಾವೆಯಲ್ಲಿ ಬರೆಸಲು ನನಗೆ ತೊಂದರೆ ಇರಲಿಲ್ಲ.

ದಾವಾಸ್ತಿ ಹನುಮಂತ ಗೌಡನ ಆಸ್ತಿ ಎಂದರೆ ಸರಿ. ದಾವಾಸ್ತಿಗಳು ದೇವಿ ಕೋಂ ಹನುಮಂತ ಗೌಡನಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾತಿ ಆಗಿದ್ದವು ಎಂದರೆ ಸರಿ. ಹನುಮಂತ ಗೌಡ ಮೃತನಾದ ನಂತರ ಸದ್ರಿ ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾತಿ ಆಯಿತು ಎಂದರೆ ಸರಿ. ಈ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ. ಹನುಮಂತ ಗೌಡ ಮೃತಪಟ್ಟ ಒಂದು ವಾರದ ನಂತರ ನಮಗೆ ಈ ವಿಚಾರ ಗೊತ್ತಾಗಿರುತ್ತದೆ. ಹನುಮಂತ ಗೌಡ ಮೃತಪಟ್ಟ ಒಂದು ವರ್ಷದ ನಂತರ 1 ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಹೆಸರು ಬದಲಾವಣೆ ಆಗಿರುವುದು ಗೊತ್ತಾಗಿರುತ್ತದೆ. ಈ ದಾವೆಯನ್ನು ಬಿಟ್ಟು ಯಾವುದೇ ನ್ಯಾಯಾಲಯದ ಮುಂದೆ ಮ್ಯುಟೇಷನನ್ನು ಪ್ರಶ್ನೆ ಮಾಡಿದ್ದು ಇರವುದಿಲ್ಲ ಎಂದರೆ ಸರಿ.

ನನ್ನ ಮತ್ತು ನನ್ನ ತಾಯಿಯ ರೆಷನ್ ಕಾರ್ಡ್ ಕಾಸರಕೋಡ ಗ್ರಾಮದಲ್ಲಿದೆ. ನಾನು ಮತ್ತು ನನ್ನ ತಾಯಿ ಕಾಸರಕೋಡನಲ್ಲಿ ಮತವನ್ನು ಹಾಕುತ್ತಿದ್ದೆವು. ಖರ್ವಾದಲ್ಲಿ ನಮಗೆ ಯಾವುದೇ ರೇಷನ್ ಕಾರ್ಡ ಇರುವುದಿಲ್ಲ. ಹನುಮಂತ ಗೌಡನಿಗೆ ಯಾರು ಸಂಬಂಧಿಕರು ಇದ್ದಾರೆ ಎಂದರೆ ಸಾಕ್ಷಿ ಅವರಿಗೆ ನಮ್ಮ ತಾಯಿಯೇ ಸಂಬಂದಿಕರು. ಬೇರೆ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಹನುಮಂತ ಗೌಡನಿಗೆ ಸಹೋದರ ಸಹೋದರಿಯರು ಎಷ್ಟು ಜನ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಮುಖ್ಯ ವಿಚಾರಣೆಯಲ್ಲಿ ಬರೆಸಿದ ವಿಚಾರಗಳನ್ನು ನನ್ನ ತಾಯಿ ಹೇಳಿದ ಹೇಳಿಕೆ ಮೇರೆಗೆ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ರೀತಿ ಹೇಳಿಕೆಯನ್ನು ನಾನು ಚಿಕ್ಕವರಿದ್ದಾಗ ನಡೆದ ಘಟನೆಯ ಬಗ್ಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆಯಲ್ಲಿ 1 ನೇ ವಾದಿ ಹನುಮಂತ ಗೌಡನ ಜೊತೆ ವಿವಾಹವಾಗಿದ್ದು ಖರ್ವಾದಲ್ಲಿ ಉಳಿದುಕೊಂಡು ಬಂದಿದ್ದು ನಂತರ ಆತನ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದ ಎಂದು ತಿಳಿಸಿದ್ದು ಈ ಎಲ್ಲಾ ವಿಚಾರವನ್ನು ನನ್ನ ತಾಯಿ ಹೇಳಿದ ಮೇರೆಗೆ ನಾನು ನುಡಿಯುತ್ತಿದ್ದೇನೆ. ಹನುಮಂತ ಗೌಡ ಮೃತಪಟ್ಟ ನಂತರ ನಮ್ಮ ಹೆಸರನ್ನು ವಾರಸಾದಲ್ಲಿ ಬರೆಸಲು ನಮಗೆ ತೊಂದರೆ ಇರಲಿಲ್ಲ. ಆ ಸಮಯದಲ್ಲಿ 1 ನೇ ವಾದಿ ಹನುಮಂತ ಗೌಡನ ಹೆಂಡತಿ ಮತ್ತು ನಾನು ಆತನ ಮಗಳು ಎನ್ನುವ ಕುರಿತು ವಂಶವೃಕ್ಷ ತಯಾರಿಸಲು ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.